ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-1.
ದೂ: 080-22372738 E-mail: nregs-ka@nic.in

ಸಂಖ್ಯೆ: 196 - 2015
ದಿನಾಂಕ: 20 | 4 | 15

ಗ್ರಾಅಪ 196 ಉಖಾಯೋ 2015 ದಿನಾಂಕ: 20-04-2015

ಗೆ

1. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
2. ರಾಜ್ಯ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2015-16ನೇ ಸಾಲಿಗೆ ಪರಿಷ್ಕರಿಸಿ ದನದ ಕೊಟ್ಟಿಗೆ, ಸಿ.ಸಿ ರಸ್ತೆ, ಸ್ಮಶಾನ ಅಭಿವೃದ್ಧಿ, ಅಂಗನವಾಡಿ ಕಟ್ಟಡ, ಒಕ್ಕಣೆ ಕಣ ಮತ್ತು ಗೋದಾಮು ಮಾದರಿ ಅಂದಾಜು ಪತ್ರಿಕೆ ನೀಡುವ ಕುರಿತು.

ಉಲ್ಲೇಖ: 1. ಕೇಂದ್ರ ಸರ್ಕಾರದ ಅಧಿಸೂಚನೆ ದಿನಾಂಕ: 31-03-2015
2. ಆಯುಕ್ತಾಲಯ ಪತ್ರ ಸಂಖ್ಯೆ: ಗ್ರಾಅಪ 74 ಉಖಾಯೋ 2014 ದಿನಾಂಕ: 07-04-2015

******

ಉಲ್ಲೇಖಿತ ಪತ್ರ(1)ರಂತೆ ಕೇಂದ್ರ ಸರ್ಕಾರವು ದಿನಾಂಕ: 01-04-2015ರಿಂದ ಜಾರಿಗೆ ಬರುವಂತೆ ಕೂಲಿದರಗಳನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸಿದೆ. ಇದರ ಪ್ರಕಾರ ಕರ್ನಾಟಕ ರಾಜ್ಯಕ್ಕೆ ರೂ. 204/- ಪ್ರತಿ ದಿನಕ್ಕೆ ಅಕುಶಲ ಕೆಲಸಕ್ಕೆ ದರ ನಿಗಧಿಪಡಿಸಿದ್ದಾರೆ. ಪ್ರತಿಯನ್ನು ಈಗಾಗಲೇ ತಮಗೆ ರವಾನಿಸಲಾಗಿದೆ.

2. ಇದರನ್ವಯ ಉಲ್ಲೇಖಿತ ಪತ್ರ ಸಂಖ್ಯೆ(2)ರ ಪ್ರಕಾರ ನರೇಗಾ ದರಪಟ್ಟಿ ಪರಿಷ್ಕರಿಸಿ ಪ್ರತಿಯನ್ನು ತಮ್ಮೆಲ್ಲರಿಗೆ ನೀಡಲಾಗಿದೆ.

3. ಈ ಯೋಜನೆಯ ಅಧಿಸೂಚಿ-1 (ದಿನಾಂಕ: 03-01-2014ರಂದು ಭಾರತ ರಾಜ್ಯ ಪತ್ರದಲ್ಲಿ ಪ್ರಕಟಿತ) ಪ್ರವರ್ಗಗಳಲ್ಲಿ ಅವಕಾಶ ಕಲ್ಪಿಸಿದಂತೆ ಈ ಕೆಳಗಿನ ಮಾದರಿ ಅಂದಾಜು ಪತ್ರಿಕೆಗಳನ್ನು ಪುನಃ ಪರಿಷ್ಕರಿಸಿ ಕೆಳಗಿನ ಷರತ್ತುಗಳಿಗೆ ಒಳಪಟ್ಟಂತೆ ಮುಂದಿನ ಆದೇಶದವರೆಗೆ ನೀಡಲಾಗಿದೆ. ಈ ಕಾಮಗಾರಿಗಳಿಗೆ ಈ ಹಿಂದೆ ನೀಡಲಾದ ಮಾದರಿ ಅಂದಾಜು ಪತ್ರಿಕೆಗಳನ್ನು ಹಿಂಪಡೆಯಲಾಗಿದೆ.

| ಕ್ರಮ ಸಂಖ್ಯೆ | ಕಾಮಗಾರಿ ಹೆಸರು | ಅವಕಾಶ ಕಲ್ಪಿಸಿದ ಅನುಸೂಚಿ-1ರ ಪ್ರವರ್ಗ | ಅಂದಾಜು ಮೊತ್ತ (ರೂ.ಗಳಲ್ಲಿ) | ಕೂಲಿ:ಸಾಮಗ್ರಿ ಅನುಪಾತ | ಷರಾ |
|---|---|---|---|---|---|
| 1 | ದನದ ಕೊಟ್ಟಿಗೆ (Model estimate of construction cattle sheds with kutcha floor) | ಪ್ರವರ್ಗ-ಬಿ ಉಪಬಂಧ- v | 35000.14 | 15.98% : 84.02% | ವೈಯಕ್ತಿಗತ ಕಾಮಗಾರಿ ಅನುಸೂಚಿ-1 ಪ್ಯಾರ 5ರ ಅರ್ಹಫಲಾನುಭವಿಗಳಿಗೆ ಮಾತ್ರ ನೀಡತಕ್ಕದ್ದು. |
| 2 | ಸಿ.ಸಿ ರಸ್ತೆ (Model Estimate for Construction of Cement Concrete Road) | ಪ್ರವರ್ಗ-ಡಿ ಉಪಬಂಧ- ii | 3,99,000.00 | 14.55% : 85.45% | ಸಮುದಾಯ ಆಧಾರಿತ ಕಾಮಗಾರಿ |
| 3 | ಸ್ಮಶಾನ ಅಭಿವೃದ್ಧಿ (Model Estimate for Construction of Graveyard) | ಪ್ರವರ್ಗ-ಡಿ ಉಪಬಂಧ- v | 4,06,000.00 | 12.18% : 87.82% | ಸಮುದಾಯ ಆಧಾರಿತ ಕಾಮಗಾರಿ |

| | | | | | |
|---|---|---|---|---|---|
| 4 | ಅಂಗನವಾಡಿ ಕಟ್ಟಡ (Model Estimate of Construction of Angnwadi Building for RGRHCL) | ಪ್ರವರ್ಗ-ಡಿ ಉಪಬಂಧ- v | 11,66,000.00 | 11.45% ಃ 88.55% | ಸಮುದಾಯ ಆಧಾರಿತ ಕಾಮಗಾರಿ |
| 5 | ಒಕ್ಕಣೆ ಕಣ (Model Estimate for Construction Thrashing Yard) | ಪ್ರವರ್ಗ-ಡಿ ಉಪಬಂಧ- vi | 1,14,000.00 | 17.35% ಃ 82.65% | ಸಮುದಾಯ ಆಧಾರಿತ ಕಾಮಗಾರಿ |
| 6 | ಗೋದಾಮು (Model Estimate for Construction of Godown) | ಪ್ರವರ್ಗ-ಡಿ ಉಪಬಂಧ- vi | 13,26,000.00 | 8.69% ಃ 91.31% | ಸಮುದಾಯ ಆಧಾರಿತ ಕಾಮಗಾರಿ |

**ಷರತ್ತುಗಳು**

1. ವ್ಯಕ್ತಿಗತ ಕಾಮಗಾರಿ ಕುರಿತಂತೆ ಈ ಯೋಜನೆಯ ಕುರಿತು ಕೇಂದ್ರ ಸರ್ಕಾರ ನೀಡಿದ ಅನುಸೂಚಿ-1ರ ಕಂಡಿಕೆ 5ರಲ್ಲಿನ ಅರ್ಹ ಫಲಾನುಭವಿ ಅವರಿಗೆ ಮಾತ್ರ ಮಂಜೂರು ಮಾಡಬಹುದು. ಪ್ರಥಮ ಆದ್ಯತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡರವರಿಗೆ ನೀಡಬಹುದು, ನಂತರ ಉಳಿದ ಫಲಾನುಭವಿಗಳಿಗೆ ಆದ್ಯತೆ ನೀಡಬಹುದು.
2. ಕಾಮಗಾರಿ ಆಯ್ಕೆ, ಅನುಷ್ಠಾನ, ನಿರ್ವಹಣೆ, ಷೆಡ್ಯೂಲ್ 1, 2 ಹಾಗೂ ಕಾರ್ಯಾಚರಣೆ ಮಾರ್ಗಸೂಚಿ 2013ರ 4ನೇ ಆವೃತ್ತಿಯ ನಿರ್ದೇಶನಗಳಿಗೆ ಒಳಪಟ್ಟಿವೆ.
3. ದನದ ಕೊಟ್ಟಿಗೆ ಛಾವಣಿ ಮತ್ತು ಅದರ support ವ್ಯವಸ್ಥೆ ಫಲಾನುಭವಿ ಮಾಡಿಕೊಳ್ಳಬಹುದು. ಕೂಲಿ ಮತ್ತು ಸಾಮಗ್ರಿಗಳ ವೆಚ್ಚದ ಶೇಕಡ 60:40ರ ಅನುಪಾತವನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಪಂಚಾಯತಿಯು ಕೈಗೊಳ್ಳುವ ಒಟ್ಟಾರೆ ಕಾಮಗಾರಿಗಳ ಮೊತ್ತದ ಮೌಲ್ಯದಲ್ಲಿ ನಿರ್ವಹಣೆ ಮಾಡುವುದು. (ಗ್ರಾಮ ಪಂಚಾಯತಿಯನ್ನು ಒಂದು ಘಟಕವನ್ನಾಗಿ ಪರಿಗಣಿಸಿದೆ)
4. ಕಾಮಗಾರಿ ಸ್ಥಳದಲ್ಲಿ ನಾಮಫಲಕ ಕಡ್ಡಾಯವಾಗಿ ಅಳವಡಿಸುವುದು.
5. ಸದರಿ ಕಾಮಗಾರಿಗೆ ಆಗುವ ವೆಚ್ಚವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುದಾನದಿಂದ ಭರಿಸತಕ್ಕದ್ದು.
6. ಅಂದಾಜು ಪಟ್ಟಿಯಂತೆ ಕಾಮಗಾರಿ ಪೂರ್ಣವಾದ ನಂತರ ಸದರಿ ವೈಯಕ್ತಿಕ ಕಾಮಗಾರಿ ಇದ್ದು, ಗ್ರಾಮ ಪಂಚಾಯತಿಯ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸೃಜಿಸಲಾದ ಆಸ್ತಿಯಾಗುತ್ತದೆ. ಅದರ ಮಾಲೀಕತ್ವ ಫಲಾನುಭವಿಯದ್ದೇ ಆಗುತ್ತದೆ. ಉಳಿದಂತೆ ಸಮುದಾಯ ಆಧಾರಿತ ಕಾಮಗಾರಿಗಳು ಗ್ರಾಮ ಪಂಚಾಯತಿಯ ಸ್ವತ್ತು ಆಗುತ್ತವೆ. ಅವುಗಳ ನಿರ್ವಹಣೆ ಗ್ರಾಮ ಪಂಚಾಯತಿಗೆ ಸಂಬಂಧಿಸಿದ ವಿಷಯವಾಗಿರುತ್ತದೆ.
7. ಪ್ರಸ್ತಾಪ ಮಾಡುವ ಕಾಮಗಾರಿಗಳನ್ನು ಗ್ರಾಮ ಸಭೆಯಿಂದ ಅನುಮೋದನೆ ಪಡೆದು ತರುವಾಯ ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಂಡು ಜಿಲ್ಲಾ ಪಂಚಾಯತಿಯಿಂದ ಅನುಮೋದನೆ ಪಡೆದು ಈ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಅನುಷ್ಠಾನಗೊಳಿಸುವುದು.
8. ನೋಂದಾಯಿತ ಕೂಲಿ ಕಾರ್ಮಿಕರಿಂದ ಮಾತ್ರ ಅಕುಶಲ ಕೆಲಸಗಳನ್ನು ನಿರ್ವಹಿಸುವುದು. ಕಾಮಗಾರಿಗಳನ್ನು ನಿರ್ಮಿಸುವುದು.
9. ಕಾಮಗಾರಿ ಗುಣಮಟ್ಟದಿಂದ ನಿರ್ಮಾಣ ಮಾಡಲು ಕೇಂದ್ರ ಸರ್ಕಾರ ಅನುಮೋದಿಸಿದಂತೆ ರೋಲರ್, ಕಾಂಕ್ರಿಟ್, ವೈಬ್ರೇಟರ್ ಇತ್ಯಾದಿ ಯಂತ್ರ ಬಳಸಲು ಪತ್ರ ಸಂಖ್ಯೆ: ಗ್ರಾಅಪ 417 ಉಖಾಯೋ 2014 ದಿನಾಂಕ: 10-09-2014ರ ಪ್ರಕಾರ ಅವಕಾಶ ಕಲ್ಪಿಸಲಾಗಿದೆ.

ಅಡಕಗಳು ಮೇಲಿನಂತೆ

ತಮ್ಮ ವಿಶ್ವಾಸಿ,

ಮುನೀಷ್ ಮೌದ್ಗಿಲ್
ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಸಲ್ಲಿಸಿದೆ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಸಹಾಯಕರಿಗೆ

2. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
3. ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
4. ಜಂಟಿ ನಿರ್ದೇಶಕರು (ತಾಂತ್ರಿಕ)/ ಜಂಟಿ ನಿರ್ದೇಶಕರು (ಆಡಳಿತ)/ ಜಂಟಿ ನಿರ್ದೇಶಕರು (ತೋಟಗಾರಿಕೆ) ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
5. M/s Effia ಮತ್ತು ಶ್ರೀ. ದೀಲಿಪ್ ಅವರಿಗೆ ಇದನ್ನು ಎಲ್ಲಾ ಅಡಕಗಳೊಂದಿಗೆ end2end ತಂತ್ರಾಂಶದಲ್ಲಿ ಅಳವಡಿಸುವುದು.

196 ದಿನಾಂಕ 20/4/2015